ಕರ್ನಾಟಕ, ಆಂಧ್ರಪ್ರದೇಶ ಮತ್ತು ದಕ್ಷಿಣ ಭಾರತದಲ್ಲಿ

# ಧಾರ್ಮಿಕ ಆಚರಣೆಯಲ್ಲಿನ ಮಹಿಳಾ ಗುಲಾಮಗಿರಿ
# ದೇವದಾಸಿ, ಜೋಗಿನಿ ಮತ್ತು ಮಾತಮ್ಮ ಪದ್ಧತಿಗಳು

ಮೆಹಬೂಬನಗರ (ಆಂಧ್ರಪ್ರದೇಶ) ರಾಯಭಾಗ (ಕರ್ನಾಟಕ)

ಕಾರ್ಯಾಗಾರಗಳು
ನವ್ಹೆಂಬರ 2006

# ಸಮಗ್ರ ವರದಿ


**ಶ್ರೀಮತಿ ಮ್ಯಾಗಿ ಬ್ಲಾಕ್**
ಸಲಹೆಗಾರರು
ಆಂಟಿ ಸ್ಲೇವರಿ ಇಂಟರನ್ಯಾಶನಲ್ ಸಂಸ್ಥೆ ಯು. ಕೆ.

ಮೂಲ ಇಂಗ್ಲೀಷನಿಂದ ಕನ್ನಡಕ್ಕೆ
**ಶ್ರೀ ವ್ಹಿ. ಎಸ್. ಮನವಾಡೆ**
ಸಹ - ಕಾರ್ಯದರ್ಶಿ
ವಿಮೋಚನಾ ಸಂಘ, ಅಥಣಿ
ಬೆಳಗಾವಿ ಜಿಲ್ಲೆ, ಕರ್ನಾಟಕ



**ಕಿಡ್ಸ್ ಸಂಸ್ಥೆ**
ಕಲ್ಮಠ ಕಟ್ಟಡ, ಟಿಕಾರೆ ರಸ್ತೆ, ಧಾರವಾಡ.
ಫೋನ್ 0836-2744196
e-mail : kids_dharwad@rediffmail.com

# ದೇವದಾಸಿ - ಅರ್ಥವ್ಯಾಪ್ತಿ, ಸ್ವರೂಪ ಮತ್ತು ವ್ಯಾಖ್ಯೆ

ಡಾ॥ ಜೋಗನ್ ಶಂಕರ

ಭಾರತದ ಕೆಲವು ಪ್ರದೇಶಗಳಲ್ಲಿ ಶತಮಾನಗಳ ಹಿಂದೆ ಒಂದು ಆಚರಣೆಯನ್ನು ಅಭಿವೃದ್ಧಿಪಡಿಸಲಾಗಿತ್ತು. ಅದರಲ್ಲಿ ಕೆಲವು ಮಹಿಳೆಯರನ್ನು ದೇವತೆಗಳ ಹೆಂಡಂದಿರನ್ನಾಗಿಸಿ ಅವರಿಗೆ ದೇವಿದಾಸಿ, ಜೋಗಿನಿ, ಬಸವಿ, ಕಲಾವಂತೆ, ಪಾರ್ವತಿ ಅಥವಾ ಮಾತಮ್ಮಗಳೆಂದು ನಾಮಕರಣ ಮಾಡಲಾಗಿತ್ತು. ದೇವತೆಗಳ ಈ ಹೆಂಡಂದಿರುಗಳು ದೇವಸ್ಥಾನಗಳ ಸುತ್ತಮುತ್ತ ವಾಸವಾಗಿದ್ದರು. ಅವರು ದೇವಸ್ಥಾನಗಳಲ್ಲಿ ಕೆಲವು ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಅವರು ದೊಡ್ಡ ದೊಡ್ಡ ಹಿಂದೂ ದೇವಸ್ಥಾನಗಳ ಅವಿಭಾಜ್ಯ ಅಂಗವಾಗಿದ್ದರು. ಅವರು ತಮ್ಮ ಧಾರ್ಮಿಕ ಕರ್ತವ್ಯಗಳನ್ನು ಹೊರತುಪಡಿಸಿ, ದೇವದಾಸಿಯರು ಸಮುದಾಯದ ಕಲಾವಂತರೂ ಆಗಿದ್ದರು. ಅವರು ದೇವಸ್ಥಾನಗಳಲ್ಲಿ ಮತ್ತು ಖಾಸಗಿ ಸಮಾರಂಭ-ಉತ್ಸವಗಳಲ್ಲಿ ಸಂಗೀತ ಮತ್ತು ನೃತ್ಯಗಳನ್ನು ಪ್ರದರ್ಶಿಸುತ್ತಿದ್ದರು. ಗಣ್ಯರಿಗೆ ದೇವದಾಸಿಯರನ್ನು ಮದುವೆ ಮತ್ತು ಕುಟುಂಬ ಸಮಾರಂಭಗಳಲ್ಲಿ ಆಮಂತ್ರಿಸುವದು ವಾಡಿಕೆಯಾಗಿತ್ತು.

ದೇವದಾಸಿಯರಿಗೆ ಸಂಬಂಧಪಟ್ಟಂತೆ 'ಜ್ಯಾತಿ' ಎಂಬ ಶಬ್ದವನ್ನು ದುರ್ಬಳಕೆ ಮಾಡಲಾಗಿದೆ. ''ದೇವದಾಸಿಯರ ಪ್ರಕಾರ ದೇವದಾಸಿ ಎಂಬುದು 'ಜೀವನ ಮಾರ್ಗ' ಅಥವಾ 'ವೃತ್ತಿಯ ನೈತಿಕತೆ (ವೃತ್ತಿ ಧರ್ಮ) ಆದರದು ದೇವದಾಸಿ ಜ್ಯಾತಿ ಅಲ್ಲ. ದೇವದಾಸಿ ಪದ್ಧತಿಯು ವಂಶಪಾರಂಪರೆಯಾಗಿದ್ದು ಅದು ಕೆಲವು ಅರ್ಹತೆಗಳಿಲ್ಲದೇ ಮಾಡುವ ಕೆಲಸ ಅಥವಾ ಹಕ್ಕಲ್ಲ'' (ಅಮೃತ ಶ್ರೀನಿವಾಸನ್ 1985)

ಸುಮಾರು ಒಂದು ಶತಮಾನದ ಹಿಂದೆ, ದೇವದಾಸಿಯರನ್ನು ವೇಶ್ಯೆಯರೆಂದೂ ಮತ್ತು ಅನೈತಿಕ ಮಹಿಳೆಯರೆಂದು ಬಿಂಬಿಸುವ ಒಂದು ಚಳುವಳಿಯನ್ನು ಪ್ರಾರಂಭಿಸಲಾಗಿದೆ. ಈ ಚಳುವಳಿಯು ಇಂದೂ ಮುಂದು ವರಿದಿದೆ. ದೇವದಾಸಿ ಪದ್ಧತಿಯನ್ನು ಒಂದು 'ಕಳಂಕ' ವೆಂದು ಕರೆದು ಅದನ್ನು ನಿರ್ಮೂಲನೆ ಮಾಡಬೇಕೆಂದು ಹೇಳುವದು ಒಂದು ವಾಡಿಕೆಯಾಗಿದೆ. ಈ ಪದ್ಧತಿಯು ಆಚರಣೆಯಲ್ಲಿದ್ದ ರಾಜ್ಯಗಳಲ್ಲಿ ಅದನ್ನು ಕಾನೂನು ಪ್ರಕಾರ ಕೆಲವು ವರುಷಗಳ ಹಿಂದೆಯೇ ನಿರ್ಮೂಲನೆ ಮಾಡಲಾಗಿದೆ. ಈ ಸಂಸ್ಥೆಯು ಬಹುತೇಕವಾಗಿ ಸತ್ತು ಹೋಗಿದೆ ಮತ್ತು ಅದರ ಪಳೆಯುಳಿಕೆಯ ಸ್ವರೂಪ ಮಾತ್ರ ಇಂದು ಅಸ್ತಿತ್ವದಲ್ಲಿದೆ.

ಅದನ್ನು ಸಮರ್ಥಿಸುವ ಯಾವ ಸಂಸ್ಥೆಗಳು ಅಸ್ತಿತ್ವದಲ್ಲಿರದ ಕಾರಣ ಯಾರೊಬ್ಬರು ಈ ಆಚರಣೆಯನ್ನು ಪುನರುಜ್ಜೀವಿತಗೊಳಿಸಲು ಬಯಸುತ್ತಿಲ್ಲ. ಅದಾಗಬಾರದು, ಪರಂತು ದೇವದಾಸಿಯರು ವೈಶ್ಯೆಯರಲ್ಲ ಎಂಬ ಸತ್ಯವನ್ನು ಅರಿಯಲು ಪ್ರತಿಬಂಧಿಸುವದು ಸರಿಯಲ್ಲ (ಈಗಲೂ ಹೆಚ್ಚಿನ ಸಂಖ್ಯೆಯ ದೇವದಾಸಿಯರು ವೈಶ್ಯೆಯರಲ್ಲ). ಅವಳು ಗ್ರಾಮದೇವತೆಯನ್ನು ಮದುವೆಯಾಗಿದ್ದಾಳೆ ಅಂದರೆ ಅದರರ್ಥ ಅವಳು ದೈಹಿಕ ಸಹಜ ಲೈಂಗಿಕ ಜೀವನದಿಂದಾಗಲಿ ಅಥವಾ ಮಕ್ಕಳನ್ನು ಹೆರುವುದಾಗಲಿ ಮಾಡಬಾರದೆಂದಾಗಲಿ ಅಲ್ಲ. ವಿವಾಹಿತ ಮಹಿಳೆಯಂತೆ ಅವಳು ಲೈಂಗಿಕ ನೈತಿಕತೆಯ ಸ್ಪಷ್ಟ ನಿಯಮಗಳಿಂದ ಬಂಧಿತಳಾಗಿಲ್ಲವೆಂಬುದು ಸತ್ಯ. ಅವಳು ಸಹಜವಾದ ಲೈಂಗಿಕ ಬದುಕನ್ನು ಬದುಕುತ್ತಾಳೆ, ಅವಳಿಗೆ ಸರಿ ಎನಿಸುವ ಲೈಂಗಿಕ ಸಂಗಾತಿಯನ್ನು ಆರಿಸಿಕೊಳ್ಳುತ್ತಾಳೆ, ಆತ ಅವಳ ವಿವಾಹಿತ ಗಂಡನಾಗದಿರಬಹುದು. ಆದರೆ ಬಹುತೇಕವಾಗಿ ಅವನೊಡನೆ ಹೆಚ್ಚಿನ ಅವಧಿಗೆ ಸಂಬಂಧವನ್ನು ಉಳಿಸಿಕೊಂಡು ಬರುತ್ತಾಳೆ.

ದೇವದಾಸಿಯರ ಜೀವನ ಮತ್ತು ಸಂಪ್ರದಾಯಗಳನ್ನು ತಿಳಿದುಕೊಳ್ಳುವದೆಂದರೆ ಧಾರಾಳವಾದ ಭಾರತೀಯ ಸಮಾಜ, ಕಲೆ ಮತ್ತು ಸಂಸ್ಕೃತಿ ಸಂಪ್ರದಾಯಗಳನ್ನು ತಿಳಿದುಕೊಳ್ಳುವುದಾಗಿದೆ. ಅತಿರಂಜಿತ ಸಂಪ್ರದಾಯಬದ್ಧ ನವ ವಿಜಯದುಂದುಭಿಯ ಹಿಂದುತ್ವವನ್ನು ಬಿಂಬಿಸುವದು, ವಿಶೇಷವಾಗಿ ಹಿಂದು ಸಂಘಟನೆಗಳೆಂದು ಕರೆಯಿಸಿಕೊಳ್ಳುವುದರ, ಒಂದು ಪ್ರವೃತ್ತಿಯೇ ಆಗಿದೆ ಇತ್ತೀಚಿನ ದಿನಗಳಲ್ಲಿ ಅದು ಲೈಂಗಿಕ ನೈತಿಕತೆಯಲ್ಲಿ ವಿಷಯಗಳಲ್ಲಿ ವ್ಯಾಟಿಕನ್‌ವನ್ನು ಅನುಸರಿಸುತ್ತಿದೆ ಎಂದು ಕಾಣುತ್ತಿದೆ. ದೇವದಾಸಿ ಸಂಸ್ಥೆಯನ್ನು ಅರ್ಥ ಮಾಡಿಕೊಳ್ಳುವದು ಇಂತಹ ಮನಸ್ಥಿತಿಯವರಿಗೆ ಸಾಧ್ಯವಿಲ್ಲ.

ಧಾರ್ಮಿಕ ಆಚರಣೆಯಲ್ಲಿನ ಮಹಿಳಾ ಗುಲಾಮಗಿರಿ - ದೇವದಾಸಿ,
ಜೋಗಿನಿ ಮತ್ತು ಮಾತಮ್ಮ ಪದ್ಧತಿಗಳು - ಕರ್ನಾಟಕ,
ಆಂಧ್ರಪ್ರದೇಶ ಮತ್ತು ದಕ್ಷಿಣ ಭಾರತದಲ್ಲಿ
ಶ್ರೀಮತಿ ಮ್ಯಾಗಿ ಬ್ಲ್ಯಾಕ್, ಅಂತರಾಷ್ಟ್ರೀಯ ಗುಲಾಮಗಿರಿ ವಿರೋಧಿ ಸಂಸ್ಥೆಯ ಸಲಹೆಗಾರರು ಇಿ

ಪರಿವಿಡಿ

ಸಂಶೋಧನಾ ಪ್ರೊಜೆಕ್ಟಿನ ಪ್ರಸ್ತಾವನೆ
ಸಮಕಾಲೀನ ಮುಖ್ಯ ಕಾಳಜಿಗಳು
ಈ ಆಚರಣೆಗಳು ಗುಲಾಮಗಿರಿ ಎಂದೆನಿಸಿಕೊಳ್ಳುವದೇಕೆ

ಭಾಗ - 1 : ಸ್ಥಿತಿಗತಿಯ ವಿಶ್ಲೇಷಣೆ
ಆಚರಣೆಗಳ ಇತಿಹಾಸ ಮತ್ತು ಅರ್ಥೈಸುವಿಕೆ
ದೇವದಾಸಿ ಪ್ರಕಾರಗಳಲ್ಲಿನ ವೈವಿಧ್ಯತೆಗಳು
ದೇವದಾಸಿ ಪದ್ಧತಿ ಅಸ್ತಿತ್ವ
ಅರ್ಪಣೆ ಮತ್ತು ಮುಂದುವರಿಕೆಗೆ ಮುಂದಿಟ್ಟ ಕಾರಣಗಳು
ಪ್ರೇರಣಾತ್ಮಕ ಕಾರಣಗಳು
ದೇವದಾಸಿಯಾಗಿ ಜೀವನದ ಗುಣಲಕ್ಷಣಗಳು
ಸಾಮಾನ್ಯರಂತೆ ಮದುವೆಯಾಗದಿರುವಿಕೆ
ಲೈಂಗಿಕ ಸಂಬಂಧಗಳು ಮತ್ತು ಸಹಜೀವನ
ಸ್ವರ್ಗ ಸ್ಥಳ
ಬದುಕಿನ ಪರ್ಯಾಯಗಳು
ಮಧ್ಯ ಮತ್ತು ವೃದ್ಧಾಪ್ಯ ವಯಸ್ಕರ ಸಮಸ್ಯೆಗಳು
ಉತ್ಸವ ನೃತ್ಯದಿಂದ ಬರುವ ಆದಾಯ
ದೇವದಾಸಿ ಆಗುವದರಿಂದ ಕನ್ಯೆಯರ ಮತ್ತು ಮಹಿಳೆಯರ
ಮೇಲೆ ಆಗುವ ಪರಿಣಾಮಗಳು
ಆರೋಗ್ಯದ ಮೇಲೆ ಆಗುವ ಪರಿಣಾಮಗಳು
ವಿಶೇಷವಾಗಿ ಅವರ ಮಕ್ಕಳ ಶಿಕ್ಷಣದ ಮೇಲೆ
ಸ್ವ-ವ್ಯಕ್ತಿತ್ವ ಮತ್ತು ವೈಯಕ್ತಿಕ ಜೀವನದ ನಿಯಂತ್ರಣದ ಮೇಲಿನ
ತಿಳುವಳಿಕೆ.

ಭಾಗ - 2 ಪ್ರತಿಕ್ರಿಯೆ ಜವಾಬ್ದಾರಿಗಳು
ಕಾನೂನು ಮತ್ತು ಅವುಗಳ ಜಾರಿ
ಕಾರ್ಯಕ್ರಮಗಳ ಅನುಷ್ಠಾನ
ಸ್ವ- ಸಹಾಯ ಸಂಘಗಳು
ದೇವದಾಸಿ ಮತ್ತು ಜೋಗಿನಿಯರು ತಮ್ಮಷ್ಟಕ್ಕೆ ಏನು ಹೇಳುತ್ತಾರೆ
ದೇವದಾಸಿ ಮತ್ತು ಜೋಗಿನಿಯರ ಪರವಾಗಿ ಸಮರ್ಥನೆ
ಉಪಸಂಹಾರ ಮತ್ತು ಶಿಫಾರಸ್ಸುಗಳು

ಭಾಗ - 3 ಕಾರ್ಯಾಗಾರದ ಕ್ರಮ ವಿಧಾನ ಶಾಸ್ತ್ರ ಮೌಲ್ಯೀಕರಣ ವಿಶ್ಲೇಷಣೆ ಮತ್ತು ಕಾರ್ಯತಂತ್ರ

# ಪ್ರಸ್ತಾವನೆ :

2006ನೇ ವರ್ಷದಲ್ಲಿ ಆ್ಯಂಟಿ ಸ್ಲೇವರಿ ಇಂಟರನ್ಯಾಶನಲ್ ಸಂಸ್ಥೆಯಲ್ಲಿ ರೂಢಿಗತವಾಗಿದೆ ಧಾರ್ಮಿಕ ಆಚರಣೆಯ ವಿದ್ಯುಕ್ತ ಲೈಂಗಿಕ ಗುಲಾಮಗಿರಿ ಅಥವಾ ಒತ್ತಾಯದ ಧಾರ್ಮಿಕ ಮದುವೆಗಳ ಕುರಿತು ಸಂಶೋಧನಾ ಅಧ್ಯಯನವನ್ನು ಕೈಗೊಂಡಿತ್ತು. ಯುರೋಪ ಮಧ್ಯಪೂರ್ವ, ದಕ್ಷಿಣ ಏಶಿಯಾ ಹಾಗೂ ಪಶ್ಚಿಮ ಆಫ್ರಿಕಾ ದೇಶಗಳಲ್ಲಿನ ಪ್ರಾಚೀನ ಸಂಸ್ಕೃತಿಗಳಲ್ಲಿ ಕುಲದೇವತೆಗಳ ಪೂಜಾರಿಗಳು ಅಥವಾ ಭಕ್ತಾದಿಗಳು ಕುಲದೇವತೆಗಳಿಗೆ ಕನ್ಯೆಯರನ್ನು ಮದುವೆ ಮಾಡಿಸುವ ಪದ್ಧತಿ ಆಚರಣೆಯಲ್ಲಿದ್ದು ತನ್ಮೂಲಕ ಅಂತಹ ಹದಿಹರೆಯದ ಬಾಲಕಿಯರಿಗೆ ನ್ಯಾಯ ಸಮ್ಮತ ಸಾಮಾನ್ಯ ಮದುವೆಯಾಗುವ ಹಕ್ಕನ್ನು ಕಸಿದುಕೊಳ್ಳುವುದಲ್ಲದೆ ಅವರನ್ನು ಲೈಂಗಿಕವಾಗಿ ಶೋಷಣೆ ಮಾಡುವ ಪದ್ಧತಿ ಇತ್ತು. ಕೆಲವು ವ್ಯವಸ್ಥೆಗಳಲ್ಲಿ ಈ ತರಹದ ಲೈಂಗಿಕ ಸೇವೆ ಅಥವಾ ಲೈಂಗಿಕ ಗುಲಾಮಗಿರಿಯು ಈ ಹೊತ್ತಿನವರೆಗೂ ಮುಂದುವರಿದುಕೊಂಡು ಬಂದಿದೆ. ಇದು ಪಶ್ಚಿಮ ಆಫ್ರಿಕಾದ ಕೆಲವು ಪ್ರದೇಶಗಳಲ್ಲಿನ ಟ್ರೋಕೋಸಿ, ಧರ್ಮಾಚರಣೆ ಆಗಿರಬಹುದು. ಮತ್ತು ದಕ್ಷಿಣ ಭಾರತದ ಹಾಗೂ ನೇಪಾಳ ದೇಶದಲ್ಲಿನ ಹಿಂದುಗಳಲ್ಲಿನ ದೇವದಾಸಿ ಪದ್ಧತಿ ಆಗಿರಬಹುದು (ಸಂಸ್ಕೃತ ಶಬ್ಧ 'ದೇವ' ಅಂದರೆ ದೇವತೆ ಮತ್ತು 'ದಾಸಿ' ಅಂದರೆ ಸೇವಕಿ ಎಂದರ್ಥ).

ಬಹಳಷ್ಟು ಪರಿಶೀಲನೆಯ ನಂತರ ಆ್ಯಂಟಿ ಸ್ಲೇವರಿ ಇಂಟರನ್ಯಾಶನಲ್ ಸಂಸ್ಥೆಯು ತನ್ನ ಅಧ್ಯಯನವನ್ನು ದಕ್ಷಿಣ ಭಾರತದ ದೇವದಾಸಿ ಪದ್ಧತಿಗೆ ಮಾತ್ರ ಸೀಮಿತಗೊಳಿಸಿತು. ಅದರಂತೆ ದೇವದಾಸಿಯರು ಹೆಚ್ಚಿನ ಸಂಖ್ಯೆಯಲ್ಲಿರುವ ಹಾಗೂ ಪದ್ಧತಿ ಆಳವಾಗಿ ರೂಢಿಗತಗೊಂಡಿರುವ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕದ ಒಂದು ಹಾಗೂ ಆಂಧ್ರಪ್ರದೇಶ ರಾಜ್ಯದ ಒಂದು ಹೀಗೆ ಎರಡು ಸರಕಾರೇತರ ಸಹಭಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಆಂಧ್ರಪ್ರದೇಶದಲ್ಲಿ ಜೋಗಿ ಮತ್ತು ಮಾತಮ್ಮ ಎಂದು ಕರೆಸಿಕೊಳ್ಳುವ ದೇವದಾಸಿ ಪದ್ಧತಿ ಇರುವಲ್ಲಿ ಸಹಭಾಗಿ ಸಂಸ್ಥೆಯು 'ಶ್ರವಂತಿ' ಆಗಿದೆ. ಈ ಸರಕಾರೇತರ ಸಂಸ್ಥೆಯು ಆಂಧ್ರಪ್ರದೇಶದ ಕರಾವಳಿ ಪ್ರದೇಶದಲ್ಲಿನ ರಾಜಮಂಡ್ರಿಯಲ್ಲಿ ನೆಲೆಗೊಂಡಿದ್ದು ಅದು ಬಾಜಾರಿ ಲೈಂಗಿಕ ಮತ್ತು ಸಾಗಾಟದಲ್ಲಿ ಶೋಷಿತ ಬಲಿಪಶುಗಳೊಂದಿಗೆ ಕೆಲಸ ಮಾಡುತ್ತಿದ್ದು ರಾಜ್ಯ ಮಟ್ಟದಲ್ಲಿ ಪ್ರಭಾವಿವನ್ನು ಹೊಂದಿದೆ. ಕರ್ನಾಟಕ ರಾಜ್ಯದಲ್ಲಿ ಆಯ್ಕೆಯಾದ ಸಂಸ್ಥೆಯು ಕರ್ನಾಟಕ ಸಮಗ್ರ ಅಭಿವೃದ್ಧಿ ಸೇವಾ ಸಂಸ್ಥೆ (ಕಿಡ್ಸ್) ಆಗಿದ್ದು, ಧಾರವಾಡದಲ್ಲಿ ನೆಲೆಗೊಂಡಿದೆ ಹಾಗೂ ಇದು ವಂಚಿತ ಮಕ್ಕಳಿಗಾಗಿ ಹಾಗೂ ಸಾಗಾಟ ಹಾಗೂ ಬಾಜಾರಿ ಲೈಂಗಿಕ ಶೋಷಿತ ಬಲಿಪಶುಗಳಿಗಾಗಿ ಸೇವಾ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಕೆಲಸ ಮಾಡುತ್ತಿದೆ.

ಈ ಎರಡೂ ಸಹಭಾಗಿ ಸಂಸ್ಥೆಗಳು, ಆಂಧ್ರಪ್ರದೇಶ ರಾಜ್ಯದ ಜೋಗಿನಿ ಹಾಗೂ ಮಾತಮ್ಮ ಹಾಗೂ ಕರ್ನಾಟಕದ ದೇವದಾಸಿ ಪದ್ಧತಿಗಳಲ್ಲಿನ ಮಹಿಳೆಯರು ಮತ್ತು ಹದಿಹರೆಯದ ಹೆಣ್ಣುಮಕ್ಕಳ ಕುರಿತು ಸಂಶೋಧನಾ ಅಧ್ಯಯನದೊಂದಿಗೆ ಅವರ ಸ್ಥಿತಿ - ಗತಿಗಳ ಕುರಿತು ಅಧ್ಯಯನ ಕೈಗೊಂಡವು. ಇದರ ಮಾಹಿತಿಯ ಈ ವರದಿಯ ಮೂಲ ಆಧಾರವಾಗಿರುತ್ತದೆ. ಪ್ರಶ್ನಾವಳಿಗಳ (ತೆಲಗು ಮತ್ತು ಕನ್ನಡ ಭಾಷೆಗಳಲ್ಲಿ ಕ್ರಮವಾಗಿ) ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ಬಲದಿಂದ ಪ್ರಾಥಮಿಕ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಲಾಯಿತು. ಆಂಧ್ರಪ್ರದೇಶದಲ್ಲಿನ ಎರಡು ಜಿಲ್ಲೆಗಳಲ್ಲಿ - ಮೆಹಬೂಬನಗರ (ಜೋಗಿನಿ) ಚಿತ್ತೂರ (ಮಾತಮ್ಮ) ಗಳಲ್ಲಿ ಅಧ್ಯಯನವನ್ನು ಕೈಗೊಳ್ಳಲಾಯಿತು. ಕರ್ನಾಟಕದಲ್ಲಿ ದೇವದಾಸಿ ಪದ್ಧತಿಗೆ ಸಂಬಂಧಪಟ್ಟ ಮುಖ್ಯ ದೇವತೆ ಎಲ್ಲಮ್ಮ ದೇವಿಯ ದೇವಸ್ಥಾನ ಇರುವ ಸವದತ್ತಿ ಕ್ಷೇತ್ರದ ಬೆಳಗಾವಿ ಜಿಲ್ಲೆಯಲ್ಲಿ ಅಧ್ಯಯನ ಕೈಗೊಳ್ಳಲಾಯಿತು. ಬೆಳಗಾವಿ ಪ್ರದೇಶದ ದೇವದಾಸಿಯರು ಸುಮಾರು ವರ್ಷಗಳಿಂದ ಗೋವಾ, ಮುಂಬಯಿ ಮುಂತಾದ ನಗರಗಳಲ್ಲಿನ ವೇಶ್ಯಾಗೃಹಗಳಿಗೆ ವಾಣಿಜ್ಯ ಲೈಂಗಿಕ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿರುವದು ಬಹುಪ್ರಸಿದ್ಧಿ ಪಡೆದ ವಿಷಯವಾಗಿದೆ.

ಆ್ಯಂಟಿ-ಸ್ಲೇವರಿ ಇಂಟರನ್ಯಾಶನ್ ಸಂಸ್ಥೆಯೊಂದಿಗೆ ಸೇರಿ ಎರಡೂ ಸಹಭಾಗಿ ಸಂಸ್ಥೆಗಳು ಜೋಗಿನಿ ಮತ್ತು ದೇವದಾಸಿಯರಿಗಾಗಿ ಕ್ರಮವಾಗಿ ಕಾರ್ಯಾಗಾರಗಳನ್ನು ಸಹ ಸಂಘಟಿಸಿದವು. ಈ 3 ದಿನಗಳ ಕಾರ್ಯಾಗಾರಗಳು ನವ್ಹೆಂಬರ 2006 ರಲ್ಲಿ ಒಂದು ಮೆಹಬೂಬ ನಗರದಲ್ಲಿ ಹಾಗೂ ಇನ್ನೊಂದು ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಜರುಗಿದವು. ಈ ಕಾರ್ಯಾಗಾರಗಳ ಉದ್ದೇಶಗಳು ಹೀಗಿದ್ದವು - (1) ಪ್ರಾಥಮಿಕ ಸಂಶೋಧನಾ ಅಧ್ಯಯನಕ್ಕೆ ಪೂರಕವಾಗಿರುವದು, (2) ಜೋಗಿನಿ ಮತ್ತು ದೇವದಾಸಿಯರಿಗೆ ಆ್ಯಂಟಿ ಸ್ಲೇವರಿ ಇಂಟರನ್ಯಾಶನಲ್ ಸಂಸ್ಥೆಯ ಕಾರ್ಯಕರ್ತರಿಗೆ ನೇರವಾಗಿ ಪರಿಚಯ ಮಾಡಿಕೊಡುವದು, (3) ಸಹಭಾಗಿ ಸಂಸ್ಥೆಗಳೆರಡರಲ್ಲಿ ಸಹಭಾಗಿತ್ವದ ಕಲಿಕೆ ಮತ್ತು ಸಂಶೋಧನೆಗಳಲ್ಲಿನ ಕೆಲವು ತತ್ವ ಮತ್ತು ತಂತ್ರಗಳನ್ನು ಅರಿತುಕೊಳ್ಳುವದು. (4) ಹಾಗೂ ಕಾರ್ಯಾಗಾರಗಳಲ್ಲಿ ಭಾಗವಹಿಸಿದ ಮಹಿಳೆಯರು ಹಾಗೂ ನಿರ್ಧಾರ ತೆಗೆದುಕೊಳ್ಳುವವರಲ್ಲಿ ತಕ್ಷಣ ಅಥವಾ ಕಾಲಾಂತರದಲ್ಲಿ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳ ಬಲ್ಲಂತಹ ದಾರಿಗಳನ್ನು ಗುರುತಿಸಿಕೊಳ್ಳುವದು ಈ ವರದಿಯ ಕೊನೆಯಲ್ಲಿ ಸಂಶೋಧನೆಯ ಮುಖ್ಯ ಭಾಗವೂ ಆದ ಹಾಗೂ ಕಾರ್ಯಾಗಳನ್ನು ನಡೆಸಲು ಬಳಸಿದ ಕ್ರಮವಿಧಾನಶಾಸ್ತ್ರವನ್ನು ವಿಸ್ತೃತವಾಗಿ ಅಡಕಗೊಳಿಸಲಾಗಿದೆ.

## ದೇವದಾಸಿ / ಜೋಗಿನಿ ಪದ್ಧತಿಗಳ ಆಚರಣೆಯ ಪಕ್ಷಿನೋಟ :

ಕಾಯ್ದೆಗಳ ಮೂಲಕ ದೇವದಾಸಿ / ಜೋಗಿನಿ ಪದ್ಧತಿಗಳ ಆಚರಣೆಯನ್ನು ಪ್ರತಿಬಂಧಿಸಿದ್ದರೂ ಕೂಡ ಈಗಲೂ ಉಳಿದುಕೊಂಡಿದ್ದು ದೇವತೆಗಳಿಗೆ ಹೆಣ್ಣುಮಕ್ಕಳ ಅರ್ಪಣೆಯು ನಿರಾತಂಕವಾಗಿ ಹೆಚ್ಚಿನ ಸಂಖ್ಯೆಯಲ್ಲಿ ನಡದೇ ಇದೆ. ಲಭ್ಯವಿದ್ದ ಇತ್ತೀಚಿನ ಅಧಿಕೃತ ಮಾಹಿತಿಯ ಪ್ರಕಾರ ಆಂಧ್ರಪ್ರದೇಶದ ಪ್ರಮುಖ ಜಿಲ್ಲೆಗಳಲ್ಲಿ ಸುಮಾರು 17000 ವೆಂದೂ ಅದರಂತೆ ಕರ್ನಾಟಕದಲ್ಲಿ 23,000 ದೇವದಾಸಿ / ಜೋಗಿನಿ / ಮಾತಮ್ಮಗಳು ಇದ್ದಾರೆಂದು ತಿಳಿದು ಬರುತ್ತದೆ. ಈಗ ಅರ್ಪಣೆಯ ಸಂಖ್ಯೆ ಕಡಿಮೆ ಆಗಿದ್ದರೂ ಸಹ ಈ ಅಂಕಿ - ಸಂಖ್ಯೆಗಳು ಹತ್ತಾರು ಸಾವಿರಾರು ಸಂಖ್ಯೆಯಲ್ಲಿ ಈ ಮಹಿಳೆಯರು ಜೀವಂತವಿದ್ದು ತಮ್ಮ ಜೀವನವನ್ನು ಇಂತಹ ಆಚರಣೆಯಿಂದ ಸಾಕಷ್ಟು ಹಾಳು ಮಾಡಿಕೊಂಡಿದ್ದಾರೆ.

ಆಂಧ್ರಪ್ರದೇಶ ಮತ್ತು ಕರ್ನಾಟಕ ಎರಡೂ ರಾಜ್ಯಗಳಲ್ಲಿ 1980 ರ ದಶಕಗಳಲ್ಲಿ ಕಾಯ್ದೆಗಳನ್ನು ಅಂಗೀಕರಿಸಿ ದೇವದಾಸಿ ಪದ್ಧತಿಯ ಎಲ್ಲ ಆಚರಣೆ / ಉತ್ಸವಗಳನ್ನು ಅಮಾರ್ಜಿತಗೊಳಿಸಿದ್ದು ದೇವದಾಸಿ ಮಹಿಳೆಯರು ಮದುವೆಯಾದರೆ ಅವು ಕಾನೂನು ಬದ್ಧವೆಂದು ಮನ್ನಣೆ ನೀಡಲಾಗುತ್ತಿದೆ. ಇಂಥ ಆಚರಣೆಗಳನ್ನು ಕೊನೆಗೊಳಿಸಲು ಇದೇ ಮೊದಲ ಯತ್ನವೆಂದೇನೂ ಅಲ್ಲ. ಆದಾಗ್ಯೂ ಕೂಡ ಇವು ಮೊದಲಿನಕ್ಕಿಂತ ಹೆಚ್ಚು ಪರಿಣಾಮಕಾರಿ ಪ್ರಯತ್ನಗಳಾಗಿವೆ. ವಿಶೇಷಾಗಿ ಎಲ್ಲಿ ಪುನರ್ವಸತಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆಯೋ ಅಂತಹ ಸಮುದಾಯಗಳಲ್ಲಿ ಈ ಕಾರ್ಯದಲ್ಲಿ ತೊಡಗಿಕೊಂಡ ಸರಕಾರೇತರ ಸಂಸ್ಥೆಗಳು ನಂಬಿರುವುದೇನೆಂದರೆ ತಮ್ಮ ಪ್ರಯತ್ನದಲ್ಲಿ ಅವು ದೇವದಾಸಿಯರನ್ನ ತಲುಪಿದ್ದು ಈಗ ಅರ್ಪಣೆಯ ಸಂಖ್ಯೆ ಸಾಕಷ್ಟು ಇಳಿಮುಖವಾಗಿದೆ. (ಉದಾಹರಣೆ ಮೆಹಬೂಬ ನಗರದ ಜೋಗಿನಿಯರಲ್ಲಿ ಶೇಕಡಾ 50)2, ಆದಾಗ್ಯೂ ಅಭಿವೃದ್ಧಿಯಿಂದ ದೂರವಿದ್ದಂತಹ ಪ್ರದೇಶಗಳಲ್ಲಿ ಇನ್ನೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅವ್ಯಾಹತವಾಗಿ ಮುಂದುವರಿದಿದೆ. ಇಂಥ ಆಚರಣೆಯಲ್ಲಿನ ಮುಖ್ಯ ತೊಂದರೆ ಇರುವುದೇನೆಂದರೆ ಇಂತಹ ಕುಟುಂಬಗಳಲ್ಲಿನ ಹುಡಗಿಯರನ್ನು ಮಹಿಳೆಯರನ್ನು ಲೈಂಗಿಕ ಮಾರುಕಟ್ಟೆಗಳಿಗೆ ಸಾಗಾಟ ಮಾಡಿ ವೈಶ್ಯಾವೃತ್ತಿಗೆ ತೊಡಗಿಸುವುದಾಗಿದೆ ಅಥವಾ ಈಗಾಗಲೇ ಮದುವೆಯಾದ ಪುರುಷರಿಗೆ ಎರಡನೇ ಹೆಂಡತಿ ಅಥವಾ ಉಪಪತ್ನಿಗಳಾಗಿ ವೇಶ್ಯಾವೃತ್ತಿಗೆ ಇಟ್ಟುಕೊಳ್ಳುವವಳನ್ನಾಗಿಸುವುದಾಗಿದೆ.

ಪುನರ್ವಸತಿ ಕಾರ್ಯಕ್ರಮಗಳು ಬಹಳಷ್ಟು ದೇವದಾಸಿಯರಿಗೆ ಲಾಭಗಳನ್ನು ತಂದಿದ್ದರೂ ಅವುಗಳ ಪರಿಣಾಮ ಮಾತ್ರ ಅತಿ ಸೀಮಿತವಾಗಿವೆ. ಕಾಯ್ದೆಗಳು ಏನೆ ಹೇಳಿರಲಿ ದೇವದಾಸಿ ಪಥಕ್ಕೆ ಒಮ್ಮೆ ಕಾಲಿಟ್ಟರೆ ಸಾಕು, ಅದರ ಕಳಂಕ ಮಾತ್ರ ಎಂದೂ ಅಳಿಸಲಾಗದಂತಹದ್ದು. ಇದು ಜೀವಾವಧಿಯ ಶಿಕ್ಷೆಯಾಗಿದ್ದು ಸಾಮಾನ್ಯ ಜೀವನ ಹಾಗೂ ವೈವಾಹಿಕ ಜೀವನದಿಂದ ವಂಚಿತರನ್ನಾಗಿಸುತ್ತದೆಯಲ್ಲದೆ ಇದು ಶಾಶ್ವತ ಕಳಂಕವನ್ನು ತಾರತಮ್ಯದ ಮೂಲವಾಗಿದೆ. ಹರೆಯದ ಮತ್ತು ಮಧ್ಯಾವಧಿ ಕಾಲದಲ್ಲಿ ಲೈಂಗಿಕ ಶೋಷಣೆಯನ್ನು ಮತ್ತು ಜೀವನದುದ್ದಕ್ಕೂ ಕಡುಬಡತನವನ್ನು ಮಹಿಳೆಯರ ಬದುಕಿಗೆ ಕೊಡುತ್ತದೆ. ಇಂತಹ ಜೀವಾವಧಿ ಶಿಕ್ಷೆಯನ್ನು ಆಧ್ಯಾತ್ಮಿಕ ಭಾವನೆಗಳಿಂದ ಕೊರತೆ ತಡೆದುಕೊಳ್ಳಬಹುದಾದರೂ ಅಂತಹ ಪವಿತ್ರ ಜೀವನವನ್ನು ಸೇವೆಯನ್ನು ಸೂಕ್ತವಾಗಿ ಗುರುತಿಸಿಲ್ಲವೇ ಇಲ್ಲ. ದೇವತೆಯ ಕಳಂಕ ನಿರಂತರವಾಗಿದ್ದು. ಆಧ್ಯಾತ್ಮಿಕ ಪಾವಿತ್ರ್ಯತೆಯು ವೈಶ್ಯಾವೃತ್ತಿಯಿಂದ ಹಾಳುಗೊಂಡಿದೆ, ನೈಜವಾಗಿ ಆ ಪಾವಿತ್ರ್ಯ ಉಳಿದಿಲ್ಲ. ಆದುದರಿಂದ ಬ್ರಿಟಿಷ್ರ ಕಾಲದಿಂದಲೂ ಇಂತಹ ದೇವದಾಸಿ ಪದ್ಧತಿಯ ಆಚರಣೆಗಳನ್ನು ನಿರ್ಮೂಲಗೊಳಿಸುವ ಯತ್ನಗಳು ನಡೆದಿದ್ದು ಸಮಾಜವು ಅವರಿಗೆ ತೀವ್ರ ತರವಾದ ಕಳಂಕವನ್ನು ಆರೋಪಿಸುತ್ತಾ ಬಂದಿರುವದರಿಂದ ಅವರು ಲೈಂಗಿಕ ಮಾರುಕಟ್ಟೆಗಳಿಗೆ ಪ್ರವೇಶವಾಗುವ ಪದ್ಧತಿ ಹೆಚ್ಚುತ್ತ ಬಂದಿತು.

ಇದೇ ಸಮಯದಲ್ಲಿ ದಕ್ಷಿಣ ಭಾರತದಾದ್ಯಂತ ಗ್ರಾಮಗಳಲ್ಲಿನ ಎಲ್ಲಮ್ಮ ದೇವಸ್ಥಾನಗಳಲ್ಲಿ ಅರ್ಪಣೆಗೊಂಡ ಅಥವಾ ದೇವರನ್ನು ಮದುವೆ ಮಾಡಿಕೊಂಡ ಹುಡಗಿಯರು ಇಂದೂ ಕೂಡ ಪೂಜೆ ಪುನಸ್ಕಾರ ಮಾಡಿಕೊಂಡಿದ್ದಾರೆ. ಎಲ್ಲಮ್ಮ ದೇವಿಯ ಭಕ್ತರಿಗೆ ಸವದತ್ತಿಯು ಇಂದೂ ಕೂಡಾ ಮೆಕ್ಕಾ ಮತ್ತು ರೂಮಗಳಷ್ಟೇ ಪವಿತ್ರವಾಗಿದೆ. ನೂರಾರು, ಸಾವಿರಾರು, ಭಕ್ತಾಧಿಗಳು ವರ್ಷದ ಉದ್ದಕ್ಕೂ ಪ್ರತಿ ದಿನ ದೇವಸ್ಥಾನಕ್ಕೆ ಬರುತ್ತಾರೆ. ವಿಶೇಷವಾಗಿ ಜನೇವರಿ ಮತ್ತು ಫೆಬ್ರುವರಿಗಳಲ್ಲಿನ ಎರಡು ಹುಣ್ಣಿಮೆಗಳು ಹಬ್ಬವಾಗಿರುತ್ತವೆ. ಸಾರ್ವಜನಿಕವಾಗಿ ದೇವದಾಸಿ ಅರ್ಪಣೆಯು ಈಗ ನಡೆಯುತ್ತಿಲ್ಲವಾದ್ದರಿಂದ, ತಮ್ಮ ಹುಡಿಗೆಯರನ್ನು ಅರ್ಪಿಸುವಲ್ಲಿ ಆಧ್ಯಾತ್ಮಿಕ ಲಾಭವಿದೆ ಎಂದು ಅದೆಷ್ಟು ಭಕ್ತಾದಿಗಳು ನಂಬಿಕೊಂಡಿದ್ದಾರೆಂದು ತಿಳಿದುಕೊಳ್ಳುವದು ಕಷ್ಟಸಾಧ್ಯವಾಗಿದೆ.

ಎಲ್ಲ ದೇವದಾಸಿಯರು ಪರಿಶಿಷ್ಟ ಜಾತಿ / ಪಂಗಡಗಳಲ್ಲಿನ ನಿರ್ದಿಷ್ಟ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಅವರಲ್ಲಿ ಬಹುತೇಕರು ದಕ್ಷಿಣ ಭಾರತದ ನಿರ್ದಿಷ್ಟ ಕ್ಷೇತ್ರದವರಾಗಿದ್ದಾರೆ.[3] ಬೆಳಗಾವಿಯ ಅಧ್ಯಯನದ ಪ್ರಕಾರ 398 (93%) ಪರಿಶಿಷ್ಟ ಜಾತಿಗಳವರಾಗಿದ್ದರೆ ಇದಕ್ಕೆ ಹೋಲಿಕೆಯಾಗಿ ಕೇವಲ 32 (7%) ಜನ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ. ಉಚ್ಚ ವರ್ಗದವರಾರೂ ದೇವದಾಸಿಯರಿಲ್ಲ ಇಂದು, ಆದರೆ ಈ ಹಿಂದೆ ಉಚ್ಚ ಜಾತಿಯವರಲ್ಲಿಯೂ ದೇವದಾಸಿಯರಾಗುತ್ತಿದ್ದರು. ಹೀಗೆ ಎಲ್ಲ ದೇವದಾಸಿಯರು, ಬಡತನ, ಅನಕ್ಷರಸ್ಥ ಮತ್ತು ದುರ್ಲಕ್ಷಿತ ಕುಟುಂಬಗಳಿಂದಲೇ ಬಂದವರಾಗಿದ್ದಾರೆ.